**ಸಾಕ್ಷಿಯನ್ನು ದಿಃ 10.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಮೈಸೂರಿನಲ್ಲಿ ವಾಸವಿದ್ದೇನೆ. ನನಗೆ ಮೂರು ಹೆಣ್ಣು ಮಕ್ಕಳು ಒಬ್ಬ ಮಗ. ಒಬ್ಬಳಿಗೆ ಮದುವೆಯಾಗಿದ್ದು ಇನ್ನಿಬ್ಬರಿಗೆ ಮದುವೆಯಾಗಿಲ್ಲ. ಕಾವ್ಯ ಮತ್ತು ಲಕ್ಷ್ಮೀ ಸರ್ಕಾರಿ ಕಾಲೇಜಿನಲ್ಲಿ ಓದುತ್ತಿದ್ದಾರೆ. ನನ್ನ ಮಗ ಚಲಾಯಿಸುತ್ತಿದ್ದ ಬೈಕ್ ಅವನಿಗೆ ಸೇರಿದ್ದು. ಅವನು ಸೇಲ್ಸ್ ಮ್ಯಾನ್ ಆಗಿದ್ದ ಕಂಪನಿಯ ಹೆಸರು ಗೊತ್ತಿಲ್ಲ. ಅವನ ಸ್ಯಾಲರಿ ಸ್ಲಿಪ್, ಬ್ಯಾಂಕ್ ಸ್ಟೇಟ್ಮೆಂಟ್ ಹಾಜರು ಪಡಿಸಬಹುದಾ ಎಂದರೆ ನಮಗೆ ಅವನು ಏನು ಹೇಳುತ್ತಿರಲಿಲ್ಲ ಎನ್ನುತ್ತಾರೆ. ಅಪಘಾತ ಹೇಗಾಯಿತು ಎಂದು ಖುದ್ದು ಮಾಹಿತಿ ಇಲ್ಲ. ನನ್ನ ಮಗನೊಂದಿಗೆ ಶಂಭು ಮತ್ತು ಗಿರೀಶ್ ಆದಿನ ಇದ್ದರು ಎಂದರೆ ಸರಿ. ಅಪಘಾತ ಸಮಯದಲ್ಲಿ ನನ್ನ ಮಗನ ಬೈಕ್ ಗೆ ವಿಮೆ ಇರಲಿಲ್ಲ ಹಾಗೂ ಅವನಿಗೆ ಚಾಲನ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ನನ್ನ ಮಗ ತ್ರಿಬಲ್ ರೈಡಿಂಗ್ ಮಾಡಿ ವೇಗವಾಗಿ ಚಲಾಯಿಸಿದ ಕಾರಣ ಆಗಿದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಪಘಾತ ನನ್ನ ಮಗ ರವಿಯ ತಪ್ಪಿನಿಂದ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ರವಿಯ ಬೈಕ್ ಗೆ ವಿಮೆ ಇಲ್ಲದ ಕಾರಣ ಪೋಲೀಸರು ಪರಿಹಾರಕ್ಕಾಗಿ ಎದುರುದಾರರ ವಾಹನವನ್ನು ಸಿಲುಕಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ಎದುರುದಾರರ ವಾಹನದ ಚಾಲಕನ ತಪ್ಪಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿ ಹಾಕಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ಮಗನ ತಪ್ಪಿನಿಂದ ಆಗಿರುವ ಕಾರಣ ನಾವು ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ. ಪೋಲೀಸರೊಂದಿಗೆ ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿಯನ್ನು ನಾವು 6 ತಿಂಗಳ ನಂತರ ಸಲ್ಲಿಸಿರುವ ಕಾರಣ ನಾನು ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.